ಹೆಚ್ಚು ಹಣವನ್ನು ಹಾಕಿಕೊಂಡು ಮನೆಗಳನ್ನು ಕಟ್ಟಿರುವುದಾದರೆ ಅದು ನಿಯಮಬಾಹಿರವೇನಲ್ಲ. ಹೆಚ್ಚು ಖರ್ಚು ಮಾಡಿ ಒಳ್ಳೆಯ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಇದೆ. ಫಲಾನುಭವಿಗಳಿಗೆ ಎರಡು ಅಥವಾ ಮೂರು ಅಥವಾ ನಾಲ್ಕನೇ ಕಂತಿನ ಚಿಕ್ಕುಗಳನ್ನು ಬಿಡುಗಡೆ ಮಾಡದೇ ಇದ್ದರೆ ಆ ಬಗ್ಗೆ ವರದಿಯನ್ನು ತರಿಸಿಕೊಂಡು ಸೂಕ್ತ ಮಾರ್ಗದರ್ಶನ ಮತ್ತು ಆದೇಶವನ್ನು ಕೊಡುತ್ತೇನೆ. ಅಮೇಲೆ ಅಣ್ಣ ತಮ್ಮಂದಿರು ಸಹಾಯವನ್ನು ಪಡೆದು ಆ ಹಣವನ್ನು ಒಂದೇ ಮನೆ ಕಟ್ಟುವ ಬಗ್ಗೆ ಉಪಯೋಗ ಮಾಡಿದ್ದರೆ ಅದು ಬೇರೆ ವಿಷಯವಾಗುತ್ತದೆ. ಆದರೆ, ನಾವು ಕೊಡುವ ಹಣದ ಜೊತೆಗೆ ಇನ್ನೂ ಹೆಚ್ಚು ಹಣವನ್ನು ಹಾಕಿ ಮನೆಯನ್ನು ಕಟ್ಟಿಕೊಳ್ಳುವುದಾದರೆ ಅದಕ್ಕೆ ನಾವು ಅಡ್ಡ ಬರುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ,

ಉಪಾಧ್ಯಕ್ಷರು : ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಇದು ಒಂದೇ ನಿರ್ದಿಷ್ಟ ಪ್ರಕರಣವಲ್ಲ. ಇಡೀ ರಾಜ್ಯದಲ್ಲಿ ತಾವು ಏನು ಒಂದು ಕಾನ್ಸ್‌ಫ್ಟ್ ಮೇಲೆ ಮನೆ ಕಟ್ಟಬೇಕೆಂದು ಹೇಳಿದ್ದೀರಿ, ಆದರ ಪ್ರಕಾರ ಫಲಾನುಭವಿಗಳು 10 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಹಾಕಿಕೊಂಡು ನಾಲ್ಕು ದನಗಳನ್ನು ಕಟ್ಟಿಕೊಳ್ಳಲು ಒಂದು ಇಪ್ಪಾರ ಒಪ್ಪಾರವನ್ನು ಹಾಕಿಕೊಂಡಿದ್ದರೂ ಅದಕ್ಕೆ ಹಣ ಕೊಡುತ್ತಿಲ್ಲ. ಜೊತೆಗೆ 20 ಸಾವಿರ ರೂಪಾಯಿಗಳನ್ನೂ ಕೊಟ್ಟಿಲ್ಲ. ಸರ್ಕಾರವು ಕೊಡತಕ್ಕಂಥ 20 ಸಾವಿರ ರೂಪಾಯಿಗಳು ಯಾವುದೇ ಕಾರಣದಿಂದ ದುರುಪಯೋಗ ಆಗದಂತೆ 'ಆಶ್ರಯ' ಮನೆಯ ವ್ಯಾಪ್ತಿಯಲ್ಲೇ ಉಪಯೋಗವಾಗಿರಬೇಕೆನ್ನುವುದೇ ಸರ್ಕಾರದ ಮುಖ್ಯ ಉದ್ದೇಶ. ಫಲಾನುಭವಿಗಳು ಸರ್ಕಾರ ಕೊಡುವ ಹಣದ ಜೊತೆಗೆ ಇನ್ನೂ ಹತ್ತು 15 ಸಾವಿರ ರೂಪಾಯಿಗಳನ್ನು ಹಾಕಿಕೊಂಡು ಉತ್ತಮವಾದ ಮತ್ತು ವ್ಯವಸ್ಥಿತವಾದ ಮನೆ ಕಟ್ಟಿಕೊಳ್ಳುವುದಕ್ಕೆ ಇ.ಒ. ಗಳು ತಡೆಯಬಾರದು. ಅವರು ಒಂದು ಕೆಲಸ ಮಾಡಬೇಕು, ಇ.ಒ. ಗಳಿಗೆ ಆಶ್ರಯ ಮನೆಗಳನ್ನು ಕೊಟ್ಟು ಅವರು ಅಲ್ಲೇ ಬದುಕುವುದಕ್ಕೆ ದಯವಿಟ್ಟು ಏರ್ಪಾಡು ಮಾಡಬೇಕು. ಇವತ್ತಿನ ದಿವಸದಲ್ಲಿ 20 ಸಾವಿರ ರೂಪಾಯಿಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ರಾಜ್ಯಾದ್ಯಂತ ಒಂದು ಆದೇಶವನ್ನು ಕೊಡಬೇಕು.

ಈ) ಮಂಜನಾಡಿ ಗ್ರಾಮ ಪಂಚಾಯತ್ತಿಗೆ 94-95ರಲ್ಲಿ ಅಂಬೇಡ್ಕರ್ ಯೋಜನೆಯಲ್ಲಿ ಮಂಜೂರಾದ ಮನೆಗಳು

ಶ್ರೀ ಕೆ. ಜಯರಾಮ ಶೆಟ್ಟಿ (ಉಲ್ಲಾಳ) : ಸನ್ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಅಭಿವೃದ್ಧಿ ಯೋಜನೆಗಳಿಗಾಗಿ ಸರ್ಕಾರವು ಕೊಡತಕ್ಕಂಥ ಹಣವನ್ನು ಗ್ರಾಮಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ಮತ್ತು ಅಲ್ಲಿರುವ ಸರ್ಕಾರಿ ಅಧಿಕಾರಿಗಳು ಯಾವ ರೀತಿ ದುರುಪಯೋಗ ಮಾಡುತ್ತಿದ್ದಾರೆಂದರೆ, ನನ್ನ ಕ್ಷೇತ್ರದ ಮಂಜನಾಡಿ ಗ್ರಾಮ ಪಂಚಾಯಿತಿಗೆ 1994-95ರಲ್ಲಿ ಅಂಬೇಡ್ಕರ್ ಯೋಜನೆಯಲ್ಲಿ ಸ್ಯಾಂಕ್ಷನ್ ಆದ 14 ಮನೆಗಳ ಪೈಕಿ ಕೇವಲ 4 ಮನೆಗಳನ್ನು ಮಾತ್ರ ಕಟ್ಟಿ ಉಳಿದ 10 ಮನೆಗಳಿಗೆ ಕೊಡಲಾಗಿರುವ ಒಂದು ಲಕ್ಷದ 65 ಸಾವಿರ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಪುನಃ 1995-96ರಲ್ಲಿ ಇದೇ ಮಂಜನಾಡಿ ಗ್ರಾಮ ಪಂಚಾಯಿತಿಗೆ ಸ್ಯಾಂಕ್ಷನ್ ಮಾಡಲಾಗಿದ್ದು 49 ಮನೆಗಳ ಪೈಕಿ 5 ಮನೆಗಳನ್ನು ಮಾತ್ರ ಕಟ್ಟಿ ಉಳಿದ ಹಣವನ್ನು ಪೂರ್ಣವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಾಲ್ಲೂಕು ಪಂಚಾಯಿತಿಯವರು ವಿಚಾರ ಮಾಡಿ ನಿರ್ದಿಷ್ಟ ಆರೋಪಗಳನ್ನು ಮಾಡಿ ಸರ್ಕಾರಕ್ಕೆ ರಿಪೋರ್ಟ್ ಸಲ್ಲಿಸಿದ್ದರೂ ಇದುವರೆಗೂ ಮಂಜನಾಡಿ ಗ್ರಾಮ ಪಂಚಾಯಿತಿಯವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ನಿರ್ದಿಷ್ಟವಾಗಿ ಅಂಕಿ ಅಂಶಗಳನ್ನು ಕೊಟ್ಟು ಭ್ರಷ್ಟಾಚಾರದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರೂ ಏಕೆ ಕ್ರಮ ತೆಗೆದುಕೊಂಡಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈ ಮಂಜನಾಡಿ ಗ್ರಾಮ ಪಂಚಾಯಿತಿಯಲ್ಲಿ ಕಳೆದ ಬಾರಿ ನಡೆದ ಗ್ರಾಮ ಪಂಚಾಯಿತಿ ಸಭೆಯಲ್ಲಿ ಇಬ್ಬರು ಸದಸ್ಯರುಗಳ ವೈಮನಸ್ಸಿನಿಂದ ವ್ಯಕ್ತಿಗತವಾಗಿ ಜಗಳಮಾಡಿರುವ ಬಗ್ಗೆ ಪೋಲೀಸ್ ಠಾಣೆಯಲ್ಲಿ ಕೆಲಸ ದಾಖಲಾಗಿದೆ. ಪೋಲೀಸ್ ಕೇಸ್ ದಾಖಲಾಗಿದೆಯೇ ಹೊರತು ಆ ಪಂಚಾಯತಿಯಲ್ಲಿ ಯಾವುದೇ ಅವ್ಯವಹಾರವಾಗಿರುವ ದೂರುಗಳನ್ನು ಕೊಟ್ಟಿಲ್ಲ. ಈ ವಿಷಯ ಪ್ರಸ್ತಾಪವಾಗುತ್ತದೆಂದು ತಿಳಿದ ತಕ್ಷಣವೇ ನಾನು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ಜೊತೆ ಟೆಲಿಫೋನ್‌ನಲ್ಲಿ ಮಾತನಾಡಿ ಮಂಜನಾಡಿ ಗ್ರಾಮಪಂಚಾಯಿತಿಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ ತಕ್ಷಣವೇ ಫ್ಯಾಕ್ಸ್ ಮೂಲಕ ತಿಳಿಸಬೇಕೆಂದು ಹೇಳಿದ್ದೇನೆ. ನಾನು ಟೆಲಿಫೋನ್ ಮೂಲಕ ಅವರೊಡನೆ ಮಾತನಾಡಿದಂಥ ಸಂದರ್ಭದಲ್ಲಿ, ಆ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಅವ್ಯವಹಾರಗಳು ನಡೆದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಈ ಮಂಜನಾಡಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತಾಲ್ಲೂಕು ಪಂಚಾಯಿತಿಯವರು ಜಿಲ್ಲಾ ಪಂಚಾಯಿತಿಗೆ ನಿರ್ದಿಷ್ಟವಾಗಿ ತಿಳಿಸಿದ್ದಾರೆಂದು ಮಾನ್ಯ ಸದಸ್ಯರು ಈ ಸದನದಲ್ಲಿ

ಪ್ರಸ್ತಾಪ ಮಾಡಿರುವುದರಿಂದ ನಾನು ಮತ್ತೊಮ್ಮೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿ ವಿಷಯವನ್ನು ತಿಳಿದುಕೊಳ್ಳುತ್ತೇನೆ ಹಾಗೂ ಅವ್ಯವಹಾರಗಳು ನಡೆದಿದ್ದರೆ ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಉ) ವಿಟ್ಲ ವಿಧಾನಸಭಾಕ್ಷೇತ್ರದಲ್ಲಿ ಕೈಗಾರಿಕಾ ವಸಾಹತ್ತು

ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಾಕ್ಷರೇ, ನನ್ನ ಕ್ಷೇತ್ರದಲ್ಲಿ ತೆಂಗಿನ ತೋಟ ಇರುವಂಥ ಪ್ರದೇಶವನ್ನು ಗುರುತಿಸಿ ಅಲ್ಲಿ ಕೈಗಾರಿಕಾ ವಸಾಹತು ಮಾಡಬೇಕೆಂದು ತೀರ್ಮಾನ ಮಾಡಿ ಈಗಾಗಲೇ ಅಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಂಥ ಕ್ರಮ ಜರುಗಿಸಿದ್ದಾರೆ. ಈಗಾಗಲೇ ನಮ್ಮ ಭಾಗದಲ್ಲಿ ಎಂ. ಆರ್. ಪಿ. ಎಲ್. ಮತ್ತು ಕೊಜೆಂಟ್ರಿಕ್ಸ್ ಬಂದಿರುವುದರಿಂದ ಈ ಸಂಬಂಧವಾಗಿ ಜನರು ಭಯಭೀತರಾಗಿದ್ದಾರೆ. ಆದುದರಿಂದ, ಕೈಗಾರಿಕಾ ವಸಾಹತು ಮಾಡತಕ್ಕಂಥ ಪ್ರದೇಶದಲ್ಲಿರುವ ಜನರು ಮತ್ತು ಅಲ್ಲಿನ ಜನ ಪ್ರತಿನಿಧಿಗಳೊಡನೆ ಈ ಬಗ್ಗೆ ಚರ್ಚಿಸಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಮುಂದುವರಿಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಸದಸ್ಯರು ಇದರ ಬಗ್ಗೆ ಯೋಗ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಖಂಡಿತವಾಗಿ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆ.

ಊ) ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ವಿಧಿಸುವ ದಂಡ :

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಅನಧಿಕೃತ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ದಿನಾಂಕ : 4-3-1997 ರಂದು ಒಂದು ಆದೇಶ ಹೊರಡಿಸಿ ಇದೇ ತಿಂಗಳು 31ನೇ ತಾರೀಖಿನ ಒಳಗೆ ದಂಡದ ಹಣವನ್ನು ಕಟ್ಟಬೇಕೆಂದು ಗಡವು ನೀಡಿದ್ದಾರೆ. ಈ ತಿಂಗಳ 31ನೇ ತಾರೀಖಿನ ಒಳಗೆ ಹಣವನ್ನು ಕಟ್ಟುವುದಕ್ಕೆ ರೈತರುಗಳಿಗೆ ಬಹಳ ಕಷ್ಟವಾಗುವುದರಿಂದ ಇನ್ನು ಎರಡು ತಿಂಗಳಾದರೂ ಸಮಯವನ್ನು ಮುಂದುವರಿಸಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಉಪಾಧ್ಯಕ್ಷರೆ, ಅನಧಿಕೃತ ಪಂಪ್‌ಸೆಟ್ಟುಗಳ ಬಗ್ಗೆ ರೈತರುಗಳು ಕಟ್ಟಬೇಕಾದ ಕಡೆಯ ದಿನಾಂಕವನ್ನು ಇನ್ನೂ ಒಂದು ತಿಂಗಳಾದರೂ